ಇತ್ತು. ಪ್ರಥಮವಾಗಿ ಕರೀನಾಳ ಸ್ನೇಹಿತನೊಬ್ಬ ಭಾಷಣ ಮಾಡಲು ಮೈಕ್ ಹಿಂದೆ ನಿಂತ, 'ಕರೀನಾಳಿಗೆ ಫುಟ್ಬಾಲ್ ಆಡುವುದು ತುಂಬಾ ಇಷ್ಟ. ಅದೂ ಅನುಪಯುಕ್ತ ಜಾಗಗಳಲ್ಲಿ ಆಡುವುದು ಇಷ್ಟ. ನಾವು ಫುಟ್ಬಾಲ್‌ನಿಂದಾಗಿಯೇ ಭೇಟಿಯಾಗಿದ್ದೆವು; ಅವಳು ಅದೊಂದು ದಿನ ಶಾಲೆಯ ಲೈಬ್ರರಿಯಲ್ಲಿ ಫುಟ್ಬಾಲ್ ಆಡುತ್ತಾ ನನ್ನ ಮುಖಕ್ಕೆ ಚೆಂಡನ್ನು ಒದ್ದಿದ್ದಳು.'

ಎಲ್ಲರೂ ನಕ್ಕರು. ಗೆಳೆಯ ತನ್ನ ಕಣ್ಣುಗಳನ್ನು ಹಿಡಿದುಕೊಂಡು ಹೇಳಿದ, 'ಇಂದಿಗೂ ನನ್ನ ಬಲಗಣ್ಣು ಆ ಫುಟ್ಬಾಲ್ ಹೊಡೆತದಿಂದಾಗಿ ಅದುರುತ್ತದೆ. ಅವಳು ನನ್ನ ಬಳಿ ಫುಟ್ಬಾಲ್ ತೆಗೆದುಕೊಳ್ಳಲು ಬಂದಳು. ತುಂಬಾ ನಾಚಿದ್ದ ಅವಳು 'ಸಾರಿ!' ಎಂದು ನನ್ನಲ್ಲಿ ಕ್ಷಮೆಯಾಚಿಸಿದಳು. ಆದರೆ ಅವಳು ನನಗೆ ಫುಟ್ಬಾಲ್‌ನಿಂದ ಹೊಡೆದು ಒಳ್ಳೆಯದನ್ನೇ ಮಾಡಿದಳು, ಆ ಹೊಡೆತ ನಮ್ಮನ್ನು ಸಮೀಪಕ್ಕೆ ತಂದಿತು.'

ಕೊನೆಯ ವ್ಯಕ್ತಿಯಾಗಿದ್ದ ಓಲಿವರ್ ಎದ್ದು ನಿಂತಾಗ, ಕುರ್ಚಿಯಲ್ಲಿ ಕೂತಿದ್ದ ಎಲ್ಲರೂ ಸ್ವಲ್ಪ ಜಾಗೃತರಾದರು. ಎಲ್ಲರೂ ಗಮನವಿಟ್ಟು ಓರ್ವ ತಂದೆಯ ಮಾತನ್ನು ಕೇಳಲಾರಂಭಿಸಿದರು. ಒಂದು ರೀತಿಯ ನಿಶ್ಶಬ್ದತೆ ಕವಿಯಿತು. ಓಲಿವರ್ ಭಾಷಣ ಮಾಡುವಲ್ಲಿ ನಿಪುಣನಾಗಿದ್ದ. ಅವನು ಭಾವನಾತ್ಮಕ ಭಾಷಣವನ್ನು ಮಾಡಿದ.

'ಪ್ರಿಯ ಬಂಧುಗಳೇ! ಪ್ರಪ್ರಥಮವಾಗಿ ನಾನು ನನ್ನ ಮಗಳ ಹುಟ್ಟುಹಬ್ಬದ ಪಾರ್ಟಿಗೆ ಬಂದ ನಿಮ್ಮೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಒಂದು ವಾರದ ಹಿಂದೆ ಕರೀನಾ ನನ್ನ ಬಳಿಗೆ ಬಂದು, 'ಪಪ್ಪಾ, ನನ್ನ ಹದಿನೆಂಟನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ನೀವೊಂದು ಚಿಕ್ಕ ಭಾಷಣವನ್ನು ಮಾಡಬೇಕಾಗುವುದು' ಎಂದು ಕೇಳಿಕೊಂಡಳು. ಆಗ ನಾನು ಪ್ರೀತಿಯಿಂದ ಆಗಲಿ ಎಂದು ಹೇಳಿದೆ. ಆದರೆ ನಾನು ಒಳಗಿನಿಂದ ಕಂಪಿಸಿದೆ. ನನಗೆ ನನ್ನ ಹೆಚ್ಚುತ್ತಿರುವ ವಯಸ್ಸು ಕಾಡಿತು. ನಾನು ನನ್ನ ಮಗಳಿಗೆ ಪಾರ್ಟಿಯನ್ನು ಏರ್ಪಾಟು ಮಾಡಬೇಕಿತ್ತು. ಅದರೆ ಪ್ರತಿ ಬಾರಿಯೂ ಅವಳ ತಾಯಿ ಗೆಲ್ಲುತ್ತಾಳೆ.

'ನಾನು ನೀನಾ ಮತ್ತು ಪಾಲ್‌ಗೂ ಧನ್ಯವಾದವನ್ನು ಹೇಳಲು ಬಯಸುತ್ತೇನೆ; ಇಬ್ಬರೂ ನನ್ನ ಮಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ. ನೀನಾ ಒಬ್ಬ ಶ್ರೇಷ್ಠ ತಾಯಿ. ಕರೀನಾ ಮತ್ತು ಜೊಹಾನಾ ಇಬ್ಬರೂ ಸುಂದರವಾಗಿದ್ದಾರೆ, ಪರಿಪಕ್ವತೆಯನ್ನು ಹೊಂದಿದ್ದಾರೆ ಹಾಗೂ ಪ್ರತಿಭಾಶಾಲಿಗಳಾಗಿದ್ದಾರೆ ಎಂಬುದನ್ನು ನೋಡಿ ನನಗೆ ತುಂಬಾ ಸಂತೋಷ ಮತ್ತು ಹೆಮ್ಮೆಯಾಗುತ್ತದೆ. ಅವರ ವ್ಯಕ್ತಿತ್ವ ನಿರ್ಮಲವಾಗಿದೆ. ಜೀವನದಲ್ಲಿ ಹದಿನೆಂಟನೆಯ ವರ್ಷ ಒಂದು ಮಹತ್ವದ ಮೈಲಿಗಲ್ಲಾಗಿದೆ. ಕರೀನಾ ಮಗಳೇ, ನನಗೆ ನೀನು ಹುಟ್ಟಿದ ದಿನಗಳು ನೆನಪಾಗುತ್ತವೆ; ನಾನು ನಿನ್ನನ್ನು ಮೊದಲ ಬಾರಿಗೆ ಆಸ್ಪತ್ರೆಯಲ್ಲಿ ನೋಡಿದ್ದೆ. ಆ ಸುಂದರ, ಚಿಕ್ಕ ಮತ್ತು ದುರ್ಬಲ ಶಿಶುವಾಗಿದ್ದ ನೀನು ಇಂದು ದಷ್ಟಪುಷ್ಟ ಮತ್ತು ಸ್ವತಂತ್ರ ಯುವತಿಯಾಗಿ ಬೆಳೆದಿದ್ದೀಯ. ಇಂದು ನೀನು ಆಗಾಗ ನಿನ್ನ ಚೇಷ್ಟೆಗಳಿಂದ ನಮ್ಮನ್ನು ಚಿಂತೆಗೀಡು ಮಾಡುವ ಓರ್ವ ಸುಂದರ ಮತ್ತು ಪ್ರತಿಭಾಶಾಲಿ ತರುಣಿಯಾಗಿ ನಿಂತಿದ್ದೀಯ'.

ಎಲ್ಲರೂ ಚಪ್ಪಾಳೆ ತಟ್ಟಿ ನಕ್ಕರು. ಓಲಿವರ್ ತುಂಬಾ ಖುಷಿಗೊಂಡ. ಜನರ ನಗು ನಿಂತ ನಂತರ ಓಲಿವರ್ ಭಾಷಣವನ್ನು ಮುಂದುವರೆಸಿದ, 'ನಿನ್ನ ಜೀವನದಲ್ಲಿ ನನಗಿಂತ ನಿನ್ನ ತಾಯಿಯ ಕೊಡುಗೆ ಹೆಚ್ಚಿದೆ. ನನಗೆ ನನ್ನ ಪುತ್ರಿಯರನ್ನು ಸಾಕುವ ಅವಕಾಶ ಸಿಗಲಿಲ್ಲ, ಇದು ನನಗೆ ನನ್ನ ಜೀವನದಲ್ಲಿ ವಿಷಾದದ ಸಂಗತಿಯಾಗಿದೆ. ಆದರೆ ನಾನು ಯಾವುದೇ ಪರಿಸ್ಥಿತಿಯಲ್ಲಿ ನಿನ್ನ ತಂದೆಯಾಗಿದ್ದೇನೆ ಎಂಬ ಸತ್ಯಾಂಶವನ್ನು ಯಾರೂ ಅಲ್ಲಗಳೆಯಲಾರರು. ತಂದೆ ತಾಯಿಯ ಪ್ರೀತಿಯನ್ನು ಅಳೆಯಲು ಸಾಧ್ಯವಿಲ್ಲ. ನಿನ್ನ ಉಜ್ವಲ ಭವಿಷ್ಯಕ್ಕಾಗಿ ನಿನಗೆ ನನ್ನ ಆಶೀರ್ವಾದವಿದೆ, ನನ್ನ ಶುಭ ಹಾರೈಕೆಯಿದೆ. ನೀನು ಸದಾ ಸುಖಿಯಾಗಿರು, ಅಭಿವೃದ್ಧಿಯ ಮಾರ್ಗದಲ್ಲಿ ಮುಂದುವರಿ, ಯಶಸ್ಸಿನ ಶಿಖರವನ್ನೇರು. ಭವಿಷ್ಯದಲ್ಲಿ ನಿನ್ನ ಮಕ್ಕಳು, ನೀನು ನಮಗೆ ಕೊಟ್ಟಷ್ಟು ಸಂತೋಷವನ್ನು ನಿನಗೂ ಕೊಡುತ್ತಾರೆ ಎಂದು ನಾನು ಆಶಿಸುತ್ತೇನೆ.'

ಕರೀನಾ ಬಾಣದಂತೆ ಓಡಿ ಹೋಗಿ ಎಲ್ಲರೆದುರು ತನ್ನ ಜನ್ಮದಾತ ಓಲಿವರ್‌ನ ಗಲ್ಲವನ್ನು ಚುಂಬಿಸಿದಳು. ಓಲಿವರ್ ತನ್ನ ತುಂಬಿ ಬಂದ ಕಣ್ಣುಗಳನ್ನು ಒರೆಸಿಕೊಂಡ.

'ಓಹ್...' ಅನೇಕರ ಬಾಯಿಯಿಂದ ಬಿಕ್ಕಳಿಕೆ ಹೊಮ್ಮಿತು.

ಒಳ್ಳೆಯ ನಟ! ನಾನು ಮನಸ್ಸಿನಲ್ಲಿ ಹೇಳಿಕೊಂಡೆ. ಕೆಲವು ವಿಷಯಗಳಿಗೆ ನಾನು ಪ್ರತ್ಯಕ್ಷ ಸಾಕ್ಷಿಯಾಗಿದ್ದೇನೆ. ಮಕ್ಕಳ ಶಾಲೆಯ ಮಹತ್ವದ ದಿನಗಳ ಬಗ್ಗೆ ಅವನಿಗೆ ಸದಾ ಮುನ್ಸೂಚನೆಯನ್ನು ಕೊಡಲಾಗುತ್ತದೆ, ಆದರೆ ಅವನು ಒಂದಲ್ಲ ಒಂದು ನೆಪ ಹೇಳಿ ಅದನ್ನು ಮುಂದಕ್ಕೆ ಹಾಕುತ್ತಾನೆ. ಮಕ್ಕಳಿಗೆ ಎಂದೂ ಉಡುಗೊರೆಯನ್ನು ಸಹ ಕೊಡುವುದಿಲ್ಲ. ಅವಳ ಶಾಲೆಯ ಶುಲ್ಕ ಮತ್ತು ಖರ್ಚಿನ ಬಗ್ಗೆ ಅವನಿಗೆ ಸಂಬಂಧವಿಲ್ಲ. ಒಮ್ಮೆ ನೀನಾ ಕೋರ್ಟ್‌ನಲ್ಲಿ ಅವನ ಬಗ್ಗೆ ಶಾಲೆಯ ಫೀಸ್ ಕೊಡುವಂತೆ ಕೇಸ್ ಹಾಕಿದಾಗ, ನಾಲ್ಕು ತಿಂಗಳವರೆಗೆ ಪುತ್ರಿಯರ ಫೀಸ್ ಕಟ್ಟಲಿಲ್ಲ. ಕಡೆಗೆ ಶಾಲೆಯ ವತಿಯಿಂದ ಒಂದು ಬಲವಾದ ನೋಟೀಸ್ ಬಂದಾಗ, ನೀನಾ ವಿಧಿಯಿಲ್ಲದೆ ಅವರ ಶಾಲೆಯ ಶುಲ್ಕವನ್ನು ಭರಿಸಬೇಕಾಯಿತು.

ಬೋಸ್ಟನ್‌ನ ಚಿಲ್ಡ್ರನ್ ಹಾಸ್ಪಿಟಲ್‌ನಲ್ಲಿ ಜೊಹಾನಾಳ ಅಪೆಂಡಿಕ್ಸ್ ಆಪರೇಷನ್ ಆಗಿದ್ದಾಗ ಜೊಹಾನಾ ತಂದೆಗಾಗಿ 'ಡ್ಯಾಡಿ–ಡ್ಯಾಡಿ' ಎಂದು ಕರೆಯುತ್ತಿದ್ದಳು. ಈ ವಿಷಯವನ್ನು ನಾನೇ ಖುದ್ದು ಫೋನ್ ಮಾಡಿ ಓಲಿವರ್‌ಗೆ ತಿಳಿಸಿದ್ದೆ. ಆದರೆ ಅವನು ತುಂಬಾ ಒರಟಾಗಿ ಉತ್ತರಿಸಿದ್ದ.

'ನನ್ನ ಬಳಿ ಬೋಸ್ಟನ್‌ಗೆ ಬರುವಷ್ಟು ಹಣವಾಗಲಿ, ಸಮಯವಾಗಲಿ ಇಲ್ಲ. ಅಲ್ಲಿ ಅವಳನ್ನು ನೋಡಲು ನೀವೆಲ್ಲಾ ಇದ್ದೀರಲ್ಲ. ನಾನು ಬರುವ ಅಗತ್ಯವೇನಿದೆ?'

ಈಗ ಇಲ್ಲಿ ಓಲಿವರ್ ತನ್ನ ಭಾಷಣದ ಮೂಲಕ ತಾನೆಷ್ಟು ಅಸಹಾಯಕನಾಗಿದ್ದು, ವಿವಶನಾಗಿದ್ದ ಎಂಬುದನ್ನು ವ್ಯಕ್ತಪಡಿಸುತ್ತಿದ್ದ. ಚೆನ್ನಾಗಿ ನಾಟಕ ಮಾಡ್ತಾನೆ. ತನ್ನ ಪುತ್ರಿಯರಿಗೆ ಏನೂ ಮಾಡದಿದ್ದರೂ, ಎಲ್ಲರ ಸಹಾನುಭೂತಿಯನ್ನು ಸಂಪಾದಿಸಿದ, ತನ್ನ ಪುತ್ರಿಯರ ಸಹಾನುಭೂತಿಯನ್ನು ಸಹ ಸಂಪಾದಿಸಿದ.

ಓಲಿವರ್ ಭಾಷಣದ ನಂತರ ಅವನೊಂದಿಗೆ ಮಾತನಾಡುವ ಅವಕಾಶ ಸಿಕ್ಕಾಗ ನಾನು ಅವನಿಗೆ ಹೇಳಿದೆ, 'ನೀವೊಬ್ಬ ಉತ್ತಮ ಕಲಾಕಾರರು'.

'ಅಂದರೆ?' ಅವನು ಕೇಳಿದ.

'ನೀವು ತುಂಬಾ ಚೆನ್ನಾಗಿ ನಿಮ್ಮ ಅಸಹಾಯಕತೆಯನ್ನು ಹೇಳಿದಿರಿ.'

ಓಲಿವರ್ ತೀಕ್ಷ್ಣವಾಗಿ ನನ್ನನ್ನು ನೋಡುತ್ತಾ ಹೇಳಿದ, 'ಆರ್ ಯೂ ನಾಟ್ ಸೈಲಿಂಗ್ ದ ಸೇಮ್ ಬೋಟ್? ನಾನಿರುವ ದೋಣಿಯಲ್ಲೇ ನೀವು ಸಹ ಕೂತಿದ್ದೀರಲ್ಲ?'

ಸೌಂದ್ರಾ ಮತ್ತು ನನಗೆ ಹೊಂದಾಣಿಕೆಯಾಗಲಿಲ್ಲ, ಹೀಗಾಗಿ ನಾವು ಬೇರೆಯಾದೆವು ಎಂಬುದು ಬೇರೆ ವಿಷಯ, ಆದರೆ ನಾನೆಂದೂ ನನ್ನ ನೈತಿಕತೆಯನ್ನು ಬಿಡಲಿಲ್ಲ. ನಾನು ಪ್ರತಿ ತಿಂಗಳು ಸೌಂದ್ರಾಳ ಬ್ಯಾಂಕ್ ಅಕೌಂಟಿಗೆ ಲೂಸಿ ಮತ್ತು ಗ್ರೇಸಿಯ ಸಂಪೂರ್ಣ ಖರ್ಚನ್ನು ನಿಷ್ಠೆಯಿಂದ ಜಮಾ ಮಾಡುತ್ತಿದ್ದೆ. ಸಾಧ್ಯವಾದಷ್ಟೂ ಲೂಸಿ ಮತ್ತು ಗ್ರೇಸಿಯೊಂದಿಗೆ ಸಮಯವನ್ನು ಕಳೆಯುತ್ತೇನೆ. ಅವರೊಂದಿಗಿರುವ ಕ್ಷಣಗಳನ್ನು ಹೆಚ್ಚು ಸಂತಸಮಯಗೊಳಿಸಲು ಪ್ರಯತ್ನಿಸುತ್ತೇನೆ. ನನ್ನ ಮತ್ತು ಸೌಂದ್ರಾಳ ವಿಚ್ಛೇದನದ ನಂತರ ಉತ್ತಮವಾದ ಕಾರ್ಯವನ್ನೇ ಮಾಡಲು ನಾನು ಶಕ್ತಿಮೀರಿ ಪ್ರಯತ್ನಿಸಿದೆ.

ನಾನೆಂದೂ ಕರೀನಾ ಮತ್ತು ಜೊಹಾನಾ ತನ್ನ ತಂದೆಯ ಬಳಿಗೆ ಹೋಗಿರುವುದನ್ನು ನೋಡಲಿಲ್ಲ; ಆದರೆ ಲೂಸಿ ಮತ್ತು ಗ್ರೇಸಿ ನನ್ನ ಬಳಿಗೆ ನಿಯಮಿತವಾಗಿ ಬಂದಿರುತ್ತಾರೆ. ನಾನು ಓಲಿವರನಂತೆ ನನ್ನ ಜವಾಬ್ದಾರಿಗಳಿಂದ ಪಲಾಯನಗೈದಿಲ್ಲ. ಇದು ನಮ್ಮಿಬ್ಬರಲ್ಲಿರುವ ವ್ಯತ್ಯಾಸವಾಗಿತ್ತು.

ನಾನು ಅವನಿಗೆ, 'ಓಲಿವರ್, ನಿನ್ನಲ್ಲಿ ಮತ್ತು ನನ್ನಲ್ಲಿ ತುಂಬಾ ವ್ಯತ್ಯಾಸವಿದೆ. ನೀನು ನಿನ್ನನ್ನು ನನಗೆ ಹೋಲಿಸಬೇಡ...' ಎಂದು ಹೇಳಲು ಬಯಸುತ್ತಿದ್ದೆ.

ಆದರೆ ನೀನಾಳ ದೃಷ್ಟಿ ನಮ್ಮಿಬ್ಬರ ಮೇಲೆ ಬಿತ್ತು. ನಾವಿಬ್ಬರು ಒಟ್ಟಿಗೆ ಇರುವುದನ್ನು ನೋಡಿ ಅವಳಿಗೆ ಅನುಮಾನ ಕಾಡಿತು. ತಕ್ಷಣ ನಮ್ಮ ಬಳಿಗೆ ಬಂದು, ನಾವೇನು ಮಾತನಾಡುತ್ತಿದ್ದೇವೆ ಎಂದು ತಿಳಿಯಲು ಪ್ರಯತ್ನಿಸಿದಳು. ನಾವಿಬ್ಬರು ಮೌನ ವಹಿಸಿದ್ದೆವು.

'ನೀವಿಬ್ಬರು ಇಲ್ಲೇನು ಮಾಡುತ್ತಿದ್ದೀರಿ? ಊಟಕ್ಕೆ ಬನ್ನಿ, ಊಟ ಬಡಿಸಲಾಗಿದೆ' ಎಂದಳು.

ಓಲಿವರ್ ನನ್ನ ಹೆಗಲ ಮೇಲೆ ಕೈಯಿಟ್ಟು ಹೇಳಿದ, 'ನೀವು ನಿಮ್ಮ ಹಿಂದಿನ ಪತ್ನಿಯ ಪತಿಯೊಂದಿಗೆ ವ್ಯವಹರಿಸಿದಂತೆಯೇ ನನ್ನೊಂದಿಗೆ ವ್ಯವಹರಿಸಿ ಎಂದು ಬಯಸುತ್ತೇನೆ'. ಹೀಗೆಂದು ಅವನು ನೀನಾಳೊಂದಿಗೆ ಹೊರಟು ಹೋದ. ನಾನು ದುಃಖಿಸುತ್ತಾ ಇಬ್ಬರು ಒಟ್ಟಿಗೆ ಹೋಗುವುದನ್ನು ನೋಡುತ್ತಿದ್ದೆ.

(ಸಶೇಷ)